ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ – 581 301
OFFICE OF THE DEPUTY COMMISSIONER, UTTARA KANNADA DISTRICT, KARWAR, -581 301
ದೂರವಾಣಿ : (08382) 226406/226471/222071, ಫ್ಯಾಕ್ಸ್: 226603/222072 Email: dckarwar@gmail.com

ನಂ. ಕೆ.ಎಲ್‌ಎಲ್‌ಎಡಿಎಸ್/ಟ್ರೈಸಿಕಲ್/ಟೆಂಡರ್/ಸಿಆರ್-17/2017-18 ದಿನಾಂಕ:17-10-2017

## ಇ-ಪ್ರೊಕ್ಯುರ್ ಮೆಂಟ್ ಟೆಂಡರ್ ಪ್ರಕಟಣೆ

ಯಾವತ್ತೂ ಅಧಿಕೃತ ಪೆಟ್ರೋಲ್ ಇಂಧನ ಚಾಲಿತ ತ್ರಿ ಚಕ್ರ ವಾಹನ ತಯಾರಕರಿಗೆ ಮತ್ತು ಅಧಿಕೃತ ಸರಬರಾಜುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಉತ್ತರ ಕನ್ನಡ ಜಿಲ್ಲೆಯ ಮಾನ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಅಂಗವಿಕಲರಿಗೆ ಪೆಟ್ರೋಲ್ ಇಂಧನ ಚಾಲಿತ ತ್ರಿ ಚಕ್ರ ವಾಹನವನ್ನು (ಮೊಟರೈಸ್ಡ್ ತ್ರಿಚಕ್ರ ವಾಹನ) ಪೂರೈಸಲು ಇಚ್ಛಿಸಿದ್ದು, ಮಾನ್ಯ ಶಾಸಕರುಗಳು ತಮ್ಮ ಪ್ರದೇಶಾಭಿವೃದ್ಧಿ ಅನುದಾನವನ್ನು ಜಿಲ್ಲಾಮಟ್ಟದಲ್ಲಿ ಕೇಂದ್ರಿಕರಿಸಿ ಇ-ಪ್ರೊಕ್ಯುರ್ ಮೆಂಟ್ ಮೂಲಕ ಟೆಂಡರ್ ಕರೆಯಲು ಇಚ್ಛಿಸಿದ್ದು ಇರುತ್ತದೆ. ಆಸಕ್ತ ಪೆಟ್ರೋಲ್ ಇಂಧನ ಚಾಲಿತ ತ್ರಿಚಕ್ರ ವಾಹನ ತಯಾರಕರು /ಅಧೀಕೃತ ಸರಬರಾಜುದಾರರು ತಮ್ಮ ದರವಾರಗಳನ್ನು ಈ ಕೆಳಗಿನ ಶರ್ತಿಗೆ ಒಳಪಟ್ಟು ದಿನಾಂಕ : 03-11-2017 ರಂದು ಸಾಯಂಕಾಲ 4.00 ಗಂಟೆ ಒಳಗಡೆ ಸಲ್ಲಿಸಬಹುದು. ಸ್ವೀಕೃತಗೊಂಡ ಟೆಂಡರಗಳನ್ನು ದಿನಾಂಕ:05-11-2017 ರಂದು ಮುಂಜಾನೆ 11.00 ಗಂಟೆಗೆ ಹಾಜರಿರುವ ವಾಹನ ತಯಾರಕರ/ ಅಧಿಕೃತ ಸರಬರಾಜುದಾರರ ಸಮ್ಮುಖದಲ್ಲಿ ಟೆಂಡರ್ ಗಳನ್ನು ತೆರೆದು ಪರಿಶೀಲಿಸಲಾಗುವುದು.

| ಕ್ರ.ಸಂ. | ವಿವರಣೆ | ಅಂದಾಜು ಪ್ರಮಾಣ (ಸಂಖ್ಯೆ) | ಅಂದಾಜು ಮೌಲ್ಯ | ದರ ಪ್ರತಿ ವಾಹನಕ್ಕೆ |
|---|---|---|---|---|
| 1 | ಅಂಗವಿಕಲರಿಗೆ ಪೆಟ್ರೋಲ್ ಇಂಧನ ಚಾಲಿತ ತ್ರಿಚಕ್ರ ವಾಹನವನ್ನು ಉತ್ತರ ಕನ್ನಡ ಜಿಲ್ಲೆಯ ರಸ್ತೆಗಳಲ್ಲಿ ಸಂಚರಿಸಲು ಯೋಗ್ಯವಾದ 110 ಸಿಸಿ ಸಾಮರ್ಥ್ಯ ಇರುವ ಟಿವಿಎಸ್, ಹಿರೋ ಹೊಂಡಾ, ಬಜಾಜ್ ಇತ್ಯಾದಿ ಸಮಾನ ಮಾದರಿಯ ಒಳ್ಳೆಯ ಗುಣಮಟ್ಟದ ತ್ರಿಚಕ್ರ ವಾಹನಗಳನ್ನು ಸರಬರಾಜು ಮಾಡುವುದು. | 20-25 | ರೂ.40 ರಿಂದ 45 ಲಕ್ಷ ಇಎಂಡಿ ರೂ.50 ಸಾವಿರ | |

ಶರ್ತುಗಳು:-

1. ಟೆಂಡರ್ ಫಾರ್ಮ ಶುಲ್ಕ ಮತ್ತು ಮುಂಗಡ ಠೇವಣಿ ಇ-ಪ್ರೊಕ್ಯುರ್ ಮೆಂಟ್ ಮೂಲಕ ಪಾವತಿಸುವುದು.
2. ಕಂಪನಿಯ ಅಧೀಕೃತ ಡೀಲರ್ ಗಳು ಮಾತ್ರ ಟೆಂಡರ್ ನಲ್ಲಿ ಭಾಗವಹಿಸುವುದು.
3. ಟೆಂಡರ್ ಮಂಜೂರಾದವರು ತ್ರಿಚಕ್ರ ವಾಹನಗಳಿಗೆ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಚೇರಿಯಿಂದ ವಾಹನ ನೋಂದಣಿ, ರಸ್ತೆ, ತೆರಿಗೆ, ಸಂಪೂರ್ಣ ವಿಮೆ ಇತ್ಯಾದಿಯನ್ನು ಸ್ವಂತ ಖರ್ಚಿನಲ್ಲಿ ಮಾಡಿಸಿಕೊಡತಕ್ಕದ್ದು.
4. ಈ ಮೇಲಿನ ಟೆಂಡರ್ ಆರ್ಥಿಕ ಇಲಾಖೆಯಿಂದ ಅನುಮೋದಿಸಿದ ಸ್ಟ್ಯಾಂಡರ್ಡ ಟೆಂಡರ್ ಡೊಕ್ಯುಮೆಂಟ್ಸ್ ಕೆ.ಜಿ.-2 ನಮೂನೆಯಲ್ಲಿ ಟೆಂಡರ್ ಕರೆದಿದ್ದು ಅದರಲ್ಲಿ ಇರುವ ಸಂಪೂರ್ಣ ಶರ್ತುಗಳಿಗೆ ಬದ್ಧರಾಗಿರತಕ್ಕದ್ದು.
5. ಟೆಂಡರ್ ಮಂಜೂರಾದವರು ಸರಬರಾಜು ಮಾಡುವ ವಾಹನವನ್ನು ಪರಿಶೀಲಿಸಿ ಮೂರನೇ ಪಾರ್ಟಿ ಪ್ರಮಾಣ ಪತ್ರ ತಮ್ಮ ಸ್ವಂತ ಖರ್ಚಿನಿಂದ ಮಾಡಿಸಿ ವಾಹನ ಸರಬರಾಜಿನ ಸಂಗಡ ನೀಡುವುದು.
6. ಇ-ಪ್ರೊಕ್ಯುರ್ ಮೆಂಟ್ ಮೂಲಕ ಟೆಂಡರ್ ಸಲ್ಲಿಸುವವರು ಯಂತ್ರ ಚಾಲಿತ ತ್ರಿಚಕ್ರ ವಾಹನಗಳಿಗೆ ಇನ್ ವ್ಯಾಲಿಡ್ ಕ್ಯಾರಿಯರ್ ಯುನಿಟ್ ಅಳವಡಿಸಿ ಮಾರ್ಪಡಿಸುವ ಕಾರ್ಯಗಳಿಗಾಗಿ ಸಾರಿಗೆ ಇಲಾಖೆಯಿಂದ ಮಾನ್ಯತೆ ಪತ್ರ ಹೊಂದಿರಬೇಕು.
7. ಸರಬರಾಜು ಮಾಡುವ ಯಂತ್ರಚಾಲಿತ ತ್ರಿಚಕ್ರ ವಾಹನಗಳು self starter ಹೊಂದಿರಬೇಕು. ಜೊತೆಗೆ ವಿಕಲಚೇತನರು ಕೈಯಲ್ಲಿ ಸ್ಟಾರ್ಟ್ ಮಾಡಲು ಅನುಕೂಲವಾಗುವಂತೆ ಕಿಕ್ಕರ್ ರಾಡ್ ಅಳವಡಿಸಿರಬೇಕು.
8. ಇನ್ ವ್ಯಾಲಿಡ್ ಕ್ಯಾರಿಯರ್ ನ ನೀಲಿನಕ್ಷೆಯನ್ನು (Blue print) ಲಗತ್ತಿಸಿರಬೇಕು.
9. ಯಂತ್ರಚಾಲಿತ ತ್ರಿಚಕ್ರ ವಾಹನಗಳನ್ನು ಟೆಂಡರುದಾರರು ಕಾರ್ಯಾದೇಶ ಪಡೆದ 15 ದಿನಗಳೊಳಗಾಗಿ ಸರಬರಾಜು ಮಾಡಬೇಕು.
10. ಸದರಿ ಟೆಂಟರ್ ಕೇಂದ್ರ ಸರಕಾರ ನಿಗದಿಪಡಿಸಿರುವ GST ತೆರಿಗೆ ವ್ಯಾಪ್ತಿಗೆ ಒಪಟ್ಟಿರುತ್ತದೆ.
11. ಟೆಂಡರನ್ನು ಪ್ರತ್ಯೇಕ ಆನ್ ಲೈನ್ ನಲ್ಲಿ ಮೊಹರು ಮಾಡಿ ಸಲ್ಲಿಸಬೇಕು. ಮೊದಲನೆಯ ತಾಂತ್ರಿಕ ಬಿಡ್ ಆಗಿದ್ದು ಇದರಲ್ಲಿ ಕೆಳಕಂಡ ದಾಖಲೆಗಳನ್ನು ಇರಿಸಬೇಕು.
    1) ಟೆಂಡರ್ ದಾರರು 2014-15, 2015-16 ಮತ್ತು 2016-17ನೇ ಸಾಲಿನ ಪ್ರಮಾಣೀಕೃತ ಆಡಿಟ್ ವರದಿಗಳು.
    2) ಸದ್ರಿ ಟೆಂಡರ್ ಕಾರ್ಯವನ್ನು ನಿರ್ವಹಿಸಲು ಲಭ್ಯವಿರುವ ಅಗತ್ಯ ಮೂಲವಿರುವ ಸೌಕರ್ಯಗಳ ಮಾಹಿತಿ.
    3) ,2014-15, 2015-16 ಮತ್ತು 2016-17ನೇ ಸಾಲಿನಲ್ಲಿ ಆದಾಯ ತೆರಿಗೆ ಪಾವತಿಸಿರುವ ದೃಢೀಕರಣ ಪತ್ರ.
    4) ಟೆಂಡರದಾರರು ಸಂಸ್ಥೆಯಾಗಿದ್ದಲ್ಲಿ ಯಾವುದೇ ಇಲಾಖೆಯಿಂದ ಕಪ್ಪು ಪಟ್ಟಿಗೆ ಸೇರಿಲ್ಲವೆಂಬ ಅಂಶವನ್ನು ಪ್ರಮಾಣೀಕರಿಸಿ ಸ್ವಯಂ ಘೋಷಣಾ ಪತ್ರ ನೀಡುವುದು.
12. ತಾಂತ್ರಿಕ ಬಿಡ್ ನ ಲಕೋಟೆ ಮತ್ತು ಆರ್ಥಿಕ ಬಿಡ್ ನ ಲಕೋಟೆಗಳನ್ನು ಬೇರೆ ಬೇರೆಯಾಗಿ ಸಲ್ಲಿಸಬೇಕು. ಹಾಗೂ ತಾಂತ್ರಿಕ ಬಿಡ್ ನಲ್ಲಿ ಪರಿಪೂರ್ಣತೆ ಸಾಧಿಸದೇ ಹೋದಲ್ಲಿ ಅಂತಹ ಟೆಂಡರುದಾರರ ಆರ್ಥಿಕ ಬಿಡ್ ಲಕೋಟೆಯನ್ನು ತೆರೆಯಲಾಗುವದಿಲ್ಲ.
13. ಅಪೂರ್ಣ ದಾಖಲಾತಿಗಳನ್ನು ಸಲ್ಲಿಸಿದಂತಹ ಟೆಂಡರ್ ನಮೂನೆಗಳನ್ನು ತಿರಸ್ಕರಿಸಲಾಗುವುದು.
14. ಟೆಂಡರ್ ಆದೇಶವು ಒಂದು ವರ್ಷದ ವರೆಗೆ ಅನ್ವಯಿಸುತ್ತಿದ್ದು ಈ ಅವಧಿಯಲ್ಲಿ ಬೇಡಿಕೆಯ ಮೇರೆಗೆ ಸರಬರಾಜು ಮಾಡಲು ಆದೇಶ ನೀಡಿದಲ್ಲಿ ಟೆಂಡರನಲ್ಲಿ ನಿರ್ಧರಿಸಲ್ಪಟ್ಟ ದರದಲ್ಲಿಯೇ ಪೂರೈಸಲು ಬದ್ಧರಾಗಿರಬೇಕು.
15. ಈ ಹಿಂದೆ ಯಂತ್ರಚಾಲಿತ ತ್ರಿಚಕ್ರ ವಾಹನಗಳನ್ನು ಯಾವುದಾದರು ಇಲಾಖೆಗೆ ಸರಬರಾಜು ಮಾಡಿದ್ದಲ್ಲಿ ಆದೇಶದ ಪ್ರತಿಯನ್ನು ಲಗತ್ತಿಸುವುದು.

16. ಸದ್ರಿ ಟೆಂಡರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಜಿಲ್ಲಾಧಿಕಾರಿಗಳು ಉತ್ತರ ಕನ್ನಡ ಕಾರವಾರ ಇವರು ಕಾಯ್ದಿರಿಸಿಕೊಂಡಿರುತ್ತಾರೆ.

17. ಜಿಲ್ಲಾಧಿಕಾರಿಗಳು ಉತ್ತರ ಕನ್ನಡ ಕಾರವಾರ ರವರು ಈ ಮೇಲಿನ ಟೆಂಡರ ಶರತ್ತುಗಳನ್ನು ಮಾರ್ಪಾಡು ಮಾಡುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತಾರೆ.

18. ಇನ್ ವ್ಯಾಲಿಡ್ ಕ್ಯಾರಿಯರಗೆ ಸಂಬಂಧಿಸಿದಂತೆ (Automative research Authority of India) ದಿಂದ ಲೈಸನ್ಸ್ ಹೊಂದಿರಬೇಕು. ಅಥವಾ ಲೈಸನ್ಸ ಹೊಂದಿದವರಿಂದ ಮಾತ್ರ ಖರೀದಿಸಿ ಸರಬರಾಜು ಮಾಡತಕ್ಕದ್ದು.

19. ಈ ಟೆಂಡರ್ ಸಂಬಂಧ ಯಾವುದೇ ಮಾಹಿತಿ ಬೇಕಾದಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶದ ಅಭಿಯಂತರರನ್ನು ದೂರವಾಣಿ ಮೂಲಕ ಸಂಪರ್ಕಿಸಬಹುದು. ದೂರವಾಣಿ ಸಂ. 08382-221170 ಅಥವಾ dckarwar@gmail.com / pddudckd@gmail.com ಇ-ಮೇಲ್ ಮೂಲಕ ಸಂಪರ್ಕಿಸಬಹುದು.

ಜಿಲ್ಲಾಧಿಕಾರಿ,
ಉತ್ತರ ಕನ್ನಡ, ಕಾರವಾರ.

<u>ಪ್ರತಿಗಳು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ</u>

1. ಪ್ರೊಗ್ರಾಮರ್, ವಿಪತ್ತು ನಿರ್ವಹಣೆ, ಹಾಗೂ ಜಿಲ್ಲಾ ಸಮಾಲೋಚಕರು, ಸಕಾಲ ಜಿಲ್ಲಾಧಿಕಾರಿಗಳ ಕಾರ್ಯಾಲಯ ಕಾರವಾರ ಇವರಿಗೆ ಪ್ರಸ್ತುತ ಇ-ಟೆಂಡರ್ ಪ್ರಕಟಣೆಯನ್ನು https://eproc.karnataka.gov.in ನಲ್ಲಿ ಅಳವಡಿಸಿ ಈ KLLADS ಶಾಖೆಗೆ ವರದಿ ಸಲ್ಲಿಸಲು ಸೂಚಿಸಿ ಕಳುಹಿಸಿದೆ,
2. *ಡಿಸ್ಟ್ರಿಕ್ ಇನ್ ಫಾರ್ಮಟಿಕ್ ಆಫೀಸರ್, ಎನ್.ಐ.ಸಿ. ಜಿಲ್ಲಾ ಪಂಚಾಯತ, ಉ.ಕ. ಕಾರವಾರ ಇವರಿಗೆ ಸದರಿ ಪ್ರಕಟಣೆಯನ್ನು* Website Address : http://uttarakannada.nic.in ನಲ್ಲಿ ಅಳವಡಿಸಲು ಹಾಗೂ ಟೆಂಡರ್ ತೆರೆಯುವ ದಿನ/ ಸಮಯದಲ್ಲಿ ಈ ಕಚೇರಿಯಲ್ಲಿ ಹಾಜರ ಇರಲು ತಿಳಿಸಿ ಕಳುಹಿಸಿದೆ.
3. *ಈ ಕಾರ್ಯಾಲಯದ ಟೆಂಡರ್ ಬುಲೆಟನ್ ವಿಭಾಗಕ್ಕೆ - ವಾರಾಂತ್ಯದ ಟೆಂಡರ್ ಬುಲೆಟಿನ್ ನಲ್ಲಿ ಪ್ರಕಟಿಸಲು ಪ್ರತಿಗಳನ್ನು ಕಳುಹಿಸಿದೆ.*
4. *ಜಿಲ್ಲಾ ವಾರ್ತಾಧಿಕಾರಿಗಳು ವಾರ್ತಾಭವನ ಕಾರವಾರ ರವರಿಗೆ ರಾಜ್ಯ ಮಟ್ಟದ ಹಾಗೂ ಸ್ಥಳಿಯ ಮಟ್ಟದ ಪತ್ರಿಕೆಗಳಲ್ಲಿ ಜಾಹಿರಾತು ಪ್ರಕಟಪಡಿಸಲು ಕಳುಹಿಸಿದೆ.*
5. *ಈ ಕಚೇರಿಯ ಸೂಚನಾ ಫಲಕ್ಕೆ.*